ಕರ್ನಾಟಕ ಸರಕಾರ
ಕಾಲೇಜು ಶಿಕ್ಷಣ ಇಲಾಖೆ

# ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿ.

ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ –571314.

ಇ–ಮೇಲ್ :–principalgfgch@gmail.com ದೂರವಾಣಿ ಸಂಖ್ಯೆ : 08221-297070

ಸಂಖ್ಯೆ:ಸಪ್ರದಕಾಹು/ಪರೀಕ್ಷಾ ಶುಲ್ಕ 2020–21 ದಿನಾಂಕ: 22-01-2021

## ಸುತ್ತೋಲೆ

2020–21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಮಾರ್ಚ್–2021ರ ಮಾಹೆಯಲ್ಲಿ ನಡೆಯುವ 3ನೇ ಮತ್ತು 5ನೇ ಸೆಮಿಸ್ಟರ್ ಬಿ.ಎ., ಬಿ.ಕಾಂ. ಮತ್ತು ಬಿ.ಬಿ.ಎ. ಪದವಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ಶೇಕಡಾ 50ರಷ್ಟು ವಿನಾಯಿತಿ ನೀಡಿದ್ದು ಈ ರಿಯಾಯಿತಿಯು ಈ ಒಂದು ಬಾರಿಗೆ ಮಾತ್ರ ಅನ್ವಯಿಸುವಂತೆ ಈ ಕೆಳಕಂಡಂತೆ ಪರೀಕ್ಷಾ ಶುಲ್ಕ ನಿಗದಿಪಡಿಸಲಾಗಿದೆ. ಆದರಂತೆ ಶುಲ್ಕ ಪಾವತಿಸಲು ಸೂಚಿಸಲಾಗಿದೆ.

| | |
|---|---|
| ಪರೀಕ್ಷಾ ಶುಲ್ಕ ಪಾವತಿಸಲು ಮತ್ತು ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕ: | 03-02-2021 |

| ಕ್ರ ಸಂ | ತರಗತಿ | ಪ್ರವರ್ಗ–1 ಪೋಷಕರ ವಾರ್ಷಿಕ ಆದಾಯ ರೂ.2,50,000/– ಮತ್ತು ಹಿಂದುಳಿದ ವರ್ಗಗಳ ಪೋಷಕರ ವಾರ್ಷಿಕ ಆದಾಯ ರೂ.1,00,000/– ಇರುವ ವಿದ್ಯಾರ್ಥಿಗಳಿಗೆ | ಸಾಮಾನ್ಯ (ಜಿ.ಎಂ.) ವಿದ್ಯಾರ್ಥಿಗಳಿಗೆ | ರೀಪಿಟರ್ಸ್‌ಗಳಿಗೆ | |
|---|---|---|---|---|---|
| | | | | ಒಂದು ವಿಷಯಕ್ಕೆ | ಒಂದಕ್ಕಿಂತ ಹೆಚ್ಚಿನ ವಿಷಯಕ್ಕೆ |
| 1 | 3ನೇ ಸೆಮಿಸ್ಟರ್ ಬಿ.ಎ./ ಬಿ.ಕಾಂ. | 320 | 760 | 760 | 1200 |
| 2 | 5ನೇ ಸೆಮಿಸ್ಟರ್ ಬಿ.ಎ./ ಬಿ.ಕಾಂ. | 320 | 850 | 890 | 1380 |
| 3 | 3ನೇ ಸೆಮಿಸ್ಟರ್ ಬಿ.ಬಿ.ಎ. | 320 | 970 | 760 | 1620 |
| 4 | 5ನೇ ಸೆಮಿಸ್ಟರ್ ಬಿ.ಬಿ.ಎ. | 320 | 1570 | 760 | 2820 |

**ಸೂಚನೆಗಳು**

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪೂರ್ಣ ಪರೀಕ್ಷಾ ಶುಲ್ಕ ವಿನಾಯಿತಿ ಇದ್ದು ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸುವುದು.

2. ಪ್ರವರ್ಗ–1 ಮತ್ತು ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯಲು ಅರ್ಹರಾದ ಇತರೇ ವರ್ಗಗಳಿಗೆ (ಸಾಮಾನ್ಯ ವರ್ಗದವರನ್ನು ಒಳಗೊಂಡಂತೆ) ಸೇರಿದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನದ ಆದಾರದ ಮೇಲೆ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. ಆದರು ಅಂತಹ ವಿದ್ಯಾರ್ಥಿಗಳು ನಿಗಧಿ ಪಡಿಸಿದಂತೆ ಅಂಕಪಟ್ಟಿ ಶುಲ್ಕ ರೂ.320–00ಗಳನ್ನು ಪಾವತಿಸಬೇಕು.

3. ಪರೀಕ್ಷಾ ಅರ್ಜಿಯು **ಪಿಡಿಎಫ್ ಮೋಡ್** ನಲ್ಲಿದ್ದು ವಿದ್ಯಾರ್ಥಿ ಪೋರ್ಟ್‌ಲ್, ಕಾಲೇಜ್ ಪೋರ್ಟ್‌ಲ್ ಮತ್ತು ವಿಶ್ವವಿದ್ಯಾಲಯದ http://www.uni-mysore.ac.in/english-version/downloads ಜಾಲತಾಣದಲ್ಲಿ ಲಭ್ಯವಿದ್ದು ವಿದ್ಯಾರ್ಥಿಗಳು ಸದರಿ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.

4. ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು ಪ್ರವೇಶಾತಿ ಪಡೆದಿರುವ ರಶೀದಿ ನೆರಳಚ್ಚು ಪ್ರತಿ, 2 ಭಾವಚಿತ್ರ, ಪರೀಕ್ಷಾ ಶುಲ್ಕ ವಿನಾಯಿತಿ ಕೋರುವ ವಿದ್ಯಾರ್ಥಿಗಳು ಜಾತಿ/ಆದಾಯ ಪ್ರಮಾಣ ಪತ್ರ, ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿರುವ ಪ್ರತಿ, ಹಾಗೂ ಹಿಂದಿನ ಎಲ್ಲಾ ದೃಢಿಕೃತ ಅಂಕಪಟ್ಟಿಗಳು.

22/1/21
ಪ್ರಾಂಶುಪಾಲರು
ಪ್ರಾಂಶುಪಾಲರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಹುಲ್ಲಹಳ್ಳಿ – 571314

# UNIVERSITY OF MYSORE

# EXAMINATION APPLICATION FORM

**(To be filled in Block letters)** **Reg.No.** | | | | | | | | |

**(Common Application Form for all Semesters)**

**Degree**.............................................................................................**Month & Year of Exam**......................

| | | | | | | | | | |
|---|---|---|---|---|---|---|---|---|---|
| 1. College | | | | | 2. Code | | | | Photo |
| 2. Name of the candidate........................................................................................ | | | | | | | | | |
| 3. Father's Name .................................................................................................. | | | | | | | | | |
| 4. Mother's Name................................................................................................ | | | | | | | | | |
| Date of Birth | | | | Age | | Sex : M/F | | | |
| 5. Caste | SC | ST | Cat-1 | Cat-IIA | Cat-IIB | Cat-IIIA | Cat-IIIB | GM | |

| | |
|---|---|
| 6. Address for Communication........................................................ | E - mail : |
| ........................................................................................ | Telephone No. (With Code) |
| ........................................................................................ | ........................................................ |
| ........................................................ Pin | | | | | | | Mobile ........................................ |

7. Details of fee Paid :

(a) Exam Fee : Rs ........................ (b) Fine : Rs ........................ (c) Convocation fee : Rs ......................

(b) Marks Card fee : Rs .................................................. (e) PPC Fee : Rs ......................................

Total fee paid : Rs ........................ (Rupees ........................................................................... only)

(f) D.D./Receipt No : ............................................................................ Date ..............................

8. If transferred from any other College, mention the name of the Previous College .......................................

..........................................................................................................................................................

| 9. Subject / Paper NOW appering : | | | | | |
|---|---|---|---|---|---|
| Semester | Subject / Paper | QP Code | Semester | Subject/Paper | QP Code |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| Certified Xerox copies of Marks Cards enclosed | | | | | |

Certified that the information furnished above are verified and found to be correct.

*Signature of the Candidate*

*Signature of the Principal with seal and date*

SL.No. C

# ಮೈಸೂರು ವಿಶ್ವವಿದ್ಯಾನಿಲಯ

108453

## ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಅನುಸರಿಸಬೇಕಾದ ಸೂಚನೆಗಳು

1. ಪ್ರತಿದಿನ ಇರುವ ಪತ್ರಿಕೆಯ ಪರೀಕ್ಷೆ ನಡೆಯುವ ಸ್ಥಳ, ದಿನಾಂಕ, ಸಮಯ ಮತ್ತು ಇತರ ವಿವರವನ್ನು ವಿದ್ಯಾರ್ಥಿಗಳು ತಿಳಿದಿರಬೇಕು. ಪರೀಕ್ಷೆ ಪ್ರಾರಂಭವಾಗುವುದಕ್ಕೆ ಕನಿಷ್ಠ 5 ನಿಮಿಷದ ಮೊದಲು ಅವರು ತಮಗೆ ನಿಗದಿಪಡಿಸಿದ ಸ್ಥಳಗಳಲ್ಲಿ ಕುಳಿತುಕೊಳ್ಳಬೇಕು. ಪರೀಕ್ಷೆ ಪ್ರಾರಂಭವಾದ 30 ನಿಮಿಷಗಳ ನಂತರ ಪ್ರವೇಶವಿರುವುದಿಲ್ಲ.
2. ಪರೀಕ್ಷೆ ಪ್ರಾರಂಭವಾದ 30 ನಿಮಿಷಗಳವರೆಗೆ ಯಾವ ವಿದ್ಯಾರ್ಥಿಯೂ ಪರೀಕ್ಷಾ ಕೊಠಡಿಯಿಂದ ಹೊರಗೆ ಹೋಗುವಂತಿಲ್ಲ. ನಂತರ ಮುಖ್ಯ ಅಧೀಕ್ಷಕರ ಅಪ್ಪಣೆಯನ್ನು ಪಡೆಯದೆ ಹೊರಗೆ ಹೋದಲ್ಲಿ ಅವರು ಪುನಃ ಕೊಠಡಿಯೊಳಗೆ ಬರುವಂತಿಲ್ಲ.
3. ವಿದ್ಯಾರ್ಥಿಗಳು ತಮ್ಮ ಜೇಬು, ಡೆಸ್ಕು, ಬೆಂಚು, ಕುರ್ಚಿ ಹಾಗೂ ಅಕ್ಕಪಕ್ಕದಲ್ಲಿ ಇರಬಹುದಾದ ಯಾವುದೇ ಕಾಗದ, ಚೀಟಿ ಅಥವಾ ಇತರೆ ನಕಲು ಮಾಡಲು ಉಪಯೋಗಿಸಬಹುದಾದ ವಸ್ತುಗಳನ್ನು ಕೊಠಡಿ ಮೇಲ್ವಿಚಾರಕರಿಗೆ ಪರೀಕ್ಷೆ ಪ್ರಾರಂಭವಾಗುವುಡಕ್ಕೆ ಮೊದಲೇ ಕೊಡಬೇಕು.
4. ಉತ್ತರಪತ್ರಿಕೆಯ ನಿಗದಿಪಡಿಸಿರುವ ಸ್ಥಳದಲ್ಲಿ ಮಾತ್ರ ರಿಜಿಸ್ಟರ್ ನಂ. ಹಾಗೂ student ID ಬರೆಯಬೇಕು. ಬೇರೆ ಎಲ್ಲಿಯೂ ರಿಜಿಸ್ಟರ್ ನಂ. ಬರೆಯಬಾರದು. ರಿಜಿಸ್ಟರ್ ನಂ. ಎಂಟು ಅಂಕಿಗಳದ್ದಾಗಿದ್ದು ಪ್ರವೇಶಪತ್ರದಲ್ಲಿರುವಂತೆ ಮಾತ್ರ ಬರೆಯಬೇಕು. ಮುಖ್ಯ ಉತ್ತರಪತ್ರಿಕೆಯಲ್ಲಿ ನಿಗದಿ ಪಡಿಸಿರುವ ಪರೀಕ್ಷೆ ದಿನಾಂಕ ಮತ್ತು ಆ ಪತ್ರಿಕೆಯ ಕೋಡ್ ನಂಬರನ್ನು ಸ್ಪಷ್ಟವಾಗಿ ಬರೆಯಬೇಕು.
5. ನಕ್ಷೆ ಅಥವಾ ಗ್ರಾಫ್ ಹಾಳೆಗಳನ್ನು ಉಪಯೋಗಿಸಿದ್ದಲ್ಲಿ ಅವುಗಳ ಮೇಲೆ ಪತ್ರಿಕೆಯ ಕೋಡ್ ನಂ. ಮತ್ತು ಪರೀಕ್ಷೆ ದಿನಾಂಕ ಕ್ರಮ ಸಂಖ್ಯೆಯನ್ನು ಬರೆಯಬೇಕು (ಅವುಗಳ ಮೇಲೆ ರಿಜಿಸ್ಟರ್ ನಂಬರ್, student ID, ಹಾಗೂ ಉತ್ತರಪತ್ರಿಕೆಯ ಸಂಖ್ಯೆಯನ್ನು ಬರೆಯಬಾರದು.)
6. ಉತ್ತರಪತ್ರಿಕೆಯ ಕ್ರಮ ಸಂಖ್ಯೆಯನ್ನು ಕೊಠಡಿ ಮೇಲ್ವಿಚಾರಕರ ದಿನಚರಿಯಲ್ಲಿ ಬರೆದು ಪೂರ್ಣ ಸಹಿ ಮಾಡಬೇಕು.
7. ಪರೀಕ್ಷೆ ಸಮಯದಲ್ಲಿ ವಿದ್ಯಾರ್ಥಿಗಳು ಯಾವ ರೀತಿಯ ಅನಗತ್ಯ ಪ್ರಶ್ನೆಗಳನ್ನೂ ಕೇಳಬಾರದು.
8. ಅಗತ್ಯವಿರುವ ಪೆನ್ನು, ಮ್ಯಾಥಮೆಟಿಕಲ್ ಇನ್‌ಸ್ಟ್ರುಮೆಂಟ್, ಪ್ರೋಗ್ರಾಂ ಮಾಡಲಾಗದ ಕ್ಯಾಲ್ಕುಲೇಟರ್‌ಗಳನ್ನು ಪರೀಕ್ಷೆ ಕೊಠಡಿಯೊಳಗೆ ತೆಗೆದುಕೊಂಡು ಹೋಗಬಹುದು.
9. ಪ್ರಾಯೋಗಿಕ ಪರೀಕ್ಷೆಗಳು ನಡೆಯುವ ಕೇಂದ್ರಗಳು ಲಿಖಿತ (Theory) ಪರೀಕ್ಷೆಗಳು ನಡೆಯುವ ಕೇಂದ್ರಗಳಿಗಿಂತ ಬೇರೆ ಆಗಿರಬಹುದು. ಇದನ್ನು ಸಂಬಂಧಿಸಿದ ಕಾಲೇಜಿನಲ್ಲಿ (ಮೂಲ) ಖಚಿತಪಡಿಸಿಕೊಳ್ಳಬೇಕು.
10. ಒಂದು ಕಾಲೇಜಿನ ವಿದ್ಯಾರ್ಥಿ ಬೇರೆ ಕಾಲೇಜಿನಲ್ಲಿ ಲಿಖಿತ (Theory) ಪರೀಕ್ಷೆ ಬರೆಯಬೇಕಾಗಿದ್ದಲ್ಲಿ ಯಾವ ಕಾಲೇಜಿನಲ್ಲಿ ಪರೀಕ್ಷೆ ಬರೆಯಬೇಕೆಂಬುದನ್ನು ಪರೀಕ್ಷಾ ಪ್ರವೇಶ ಪತ್ರದ ಮೇಲೆ ನಮೂದಿಸಲಾಗುವುದು.
11. ಉತ್ತರಗಳನ್ನು ನೀಲಿ ಅಥವಾ ಕಪ್ಪುಶಾಯಿಯ ಪೆನ್ನನ್ನು ಮಾತ್ರ ಉಪಯೋಗಿಸಿ ಬರೆಯಬೇಕು (ಚಿತ್ರಗಳನ್ನು ಹೊರತುಪಡಿಸಿ). ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿ ಬೇಕೆಂದು ಇಚ್ಛಿಸುವವರು ಉತ್ತರಗಳನ್ನು ಬರೆಯಲು ಕಪ್ಪುಶಾಯಿಯ ಪೆನ್ನನ್ನು ಮಾತ್ರ ಉಪಯೋಗಿಸಬೇಕು.
12. ವಿದ್ಯಾರ್ಥಿಯು ತನ್ನ ಗುರುತು ಚೀಟಿ (Identity Card) ಹಾಗೂ ಪ್ರವೇಶಪತ್ರ ಇವುಗಳನ್ನು ಪರೀಕ್ಷಾ ಕೊಠಡಿಯೊಳಗೆ ಹೊಂದಿರಬೇಕು.
13. ಉತ್ತರಪತ್ರಿಕೆಯಲ್ಲಿ ಕೊನೆಗೆ ಖಾಲಿ ಉಳಿಯುವ ಎಲ್ಲಾ ಹಾಳೆಗಳ ಮೇಲೆ ವಿದ್ಯಾರ್ಥಿಯು ಉದ್ದನೆಯ ಗೆರೆ ಎಳೆಯಬೇಕು.
14. ಪರೀಕ್ಷಾ ಅವಧಿ ಮುಗಿಯುವ ಮುನ್ನ ಪರೀಕ್ಷಾ ಕೇಂದ್ರದಿಂದ ಹೊರಗೆ ಹೋದಲ್ಲಿ ಪ್ರಶ್ನೆಪತ್ರಿಕೆಯನ್ನು ತೆಗೆದುಕೊಂಡು ಹೋಗಬಹುದು.
15. ಪ್ರಶ್ನೆಗಳಿಗೆ ಸಂಬಂಧಿಸಿದ ಏನನ್ನೂ ಪ್ರಶ್ನೆ ಪತ್ರಿಕೆಯ ಮೇಲೆ ಬರೆಯಬಾರದು.
16. ನಕ್ಷೆ/ಗ್ರಾಫ್ ಹಾಳೆ ಇವುಗಳನ್ನು ಮುಖ್ಯ ಉತ್ತರ ಪತ್ರಿಕೆಗೆ ಜೋಡಿಸಿ ನಿಗದಿತ ಸ್ಥಳದಲ್ಲಿ ಮಾತ್ರ ಕಟ್ಟಬೇಕು.
17. ಉತ್ತರಗಳನ್ನು ಬರೆದು ಮುಗಿಸಿದ ಕೂಡಲೇ (ಪರೀಕ್ಷಾ ಅವಧಿಯ ಕೊನೆಗೆ) ಮೇಲ್ವಿಚಾರಕರು ಬಂದು ಉತ್ತರಹೆತ್ರಿುನ್ನು ತೆಗೆದುಕೊಳ್ಳುವವರೆಗೂ ವಿದ್ಯಾರ್ಥಿಯು ತನ್ನ ಸ್ಥಳದಲ್ಲಿ ಕುಳಿತಿರಬೇಕು.
18. ಪ್ರಾಯೋಗಿಕ ಪರೀಕ್ಷೆಯ ಸಂಬಂಧವಾಗಿ ಪ್ರಯೋಗ ಶಾಲಾ ಉಪಕರಣಗಳಿಗೆ ಧಕ್ಕೆ ಉಂಟಾದಲ್ಲಿ ಅದಕ್ಕೆ ತಗಲುವ ವೆಚ್ಚವನ್ನು ವಿದ್ಯಾರ್ಥಿಗಳೇ ಕಾಲೇಜಿಗೆ ಭರಿಸತಕ್ಕದ್ದು.
19. ಯಾವುದೇ ಕಾರಣಕ್ಕೂ ಹೆಚ್ಚುವರಿ ಉತ್ತರಪತ್ರಿಕೆಗಳನ್ನು ನೀಡಲಾಗುವುದಿಲ್ಲ.
20. ಉತ್ತರ ಪತ್ರಿಕೆಯಲ್ಲಿ ಎಲ್ಲೂ ಸಹ ಸಂಕೇತ ಗುರುತುಗಳನ್ನು– ಉದಾಹರಣೆಗೆ ಶ್ರೀ ಎಂದಾಗಲಿ, ಓಂ ಎಂದಾಗಲಿ, ನಮಃಶಿವಾಯ, ಚುಕ್ಕೆಗಳು, ✝ ಗಳಂಥ ಚಿಹ್ನೆಗಳನ್ನು ಸೂಚಿಸುವುದಾಗಲಿ – ಇತ್ಯಾದಿಗಳನ್ನು ಬರೆಯಬಾರದು.
21. ಯಾವ ವಿದ್ಯಾರ್ಥಿಯು ಪರೀಕ್ಷೆ ತೆಗೆದುಕೊಂಡು ಒಂದೂ ಪತ್ರಿಕೆಗೆ ಹಾಜರಾಗುವುದಿಲ್ಲವೋ ಅಂತಹ ವಿದ್ಯಾರ್ಥಿಗೆ ಅಂಕಪಟ್ಟಿವಿತರಿಸಲಾಗುವುದಿಲ್ಲ.
22. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನುಗಳನ್ನು ತರುವುದನ್ನು ನಿಷೇಧಿಸಲಾಗಿದೆ.

### ಪರೀಕ್ಷಾ ಅಕ್ರಮ

ಕ್ರಮಸಂಖ್ಯೆ 8 ಮತ್ತು 12ರಲ್ಲಿ ಹೇಳಿರುವುದನ್ನು ಹೊರತುಪಡಿಸಿ, ನಕಲು ಮಾಡಲು ಸಹಾಯವಾಗುವಂತಹ ಬೇರೆ ಯಾವುದೇ ರೀತಿಯ ಕಾಗದ / ಚೀಟಿಗಳನ್ನು ಹೊಂದಿದಲ್ಲಿ / ಬೇರೆ ವಿದ್ಯಾರ್ಥಿಯ ಉತ್ತರಪತ್ರಿಕೆಯಿಂದ ನಕಲು ಮಾಡುತ್ತಿದ್ದಲ್ಲಿ ತಮ್ಮ ಗುರುತನ್ನು ಯಾವುದೇ ರೀತಿಯಲ್ಲಿ ಉತ್ತರ ಪತ್ರಿಕೆಯ ಮೇಲೆ ನಮೂದಿಸಿದ್ದಲ್ಲಿ (ಕ್ರಮ. ಸಂಖ್ಯೆ 4, ಹಾಗೂ 5ರಲ್ಲಿ ಹೇಳಿರುವುದನ್ನು ಬಿಟ್ಟು) ಅಥವಾ ಇನ್ನಾವುದೇ ರೀತಿಯ ಪರೀಕ್ಷಾ ಅಕ್ರಮದಲ್ಲಿ ತೊಡಗಿದ್ದಲ್ಲಿ, ಆ ವಿದ್ಯಾರ್ಥಿಯ ಮೇಲೆ ಪರೀಕ್ಷಾ ಅಕ್ರಮಗಳ ಅಧ್ಯಾದೇಶಗಳ ರೀತಿ ಕ್ರಮ ಕೈಗೊಳ್ಳಲಾಗುವುದು.